# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಬಿ) ಇಲಾಖೆ

## ಅಧಿಸೂಚನೆ

2018 ಏಪ್ರಿಲ್ 7,
ನಂಬ್ರ 24391/ಲೆಗ್. ಬಿ1/2017/ಕಾನೂನು. *ತಿರುವನಂತಪುರಂ,* 1193 ಮೀನ 24/
1940 ಚೈತ್ರ 17.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2018 ಏಪ್ರಿಲ್ 7ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

ಕಾನೂನು ಕಾರ್ಯದರ್ಶಿ.

## 2018ರ 12ನೇ ಅಧಿನಿಯಮ

## 2018ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು (ತಿದ್ದುಪಡಿ) ಅಧಿನಿಯಮ

1951ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1951ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು ಅಧಿನಿಯಮ (1951ರ XIXನೇ ಮದ್ರಾಸ್ ಅಧಿನಿಯಮ)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2018ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು (ತಿದ್ದುಪಡಿ) ಅಧಿನಿಯಮ ಎಂದು ಕರೆಯಬಹುದು.

(2) ಇದು 2017 ಜನವರಿ 1ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 8ಸಿ ವಿಭಾಗದ ತಿದ್ದುಪಡಿ.—1951ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು ಅಧಿನಿಯಮ (1951ರ XIXನೇ ಮದ್ರಾಸ್ ಅಧಿನಿಯಮ) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 8ಸಿ ವಿಭಾಗದ (1)ನೇ ಉಪ-ವಿಭಾಗದಲ್ಲಿ, "ಸರಕಾರದ ಒಬ್ಬ ಜೋಯಿಂಟ್ ಸೆಕ್ರಟರಿ" ಎಂಬ ಪದಗಳ ಬದಲು "ವಿಭಾಗ 19ಜಿಯ ನಿಬಂಧನೆಯ ಪ್ರಕಾರ ಕಮೀಷನರಾಗಿ ಭಡ್ತಿಗೆ ಅರ್ಹತೆ ಇರುವಂತಹ, ರದ್ದುಗೊಂಡಂತಹ ಇಲಾಖೆಯಲ್ಲಿನ ಒಬ್ಬ ಡೆಪ್ಯೂಟಿ ಕಮೀಷನರ್ ಹಾಗೂ ಅವರ ಗೈರುಹಾಜರಿಯಲ್ಲಿ ಸರಕಾರದ ಒಬ್ಬ ಜೋಯಿಂಟ್ ಸೆಕ್ರಟರಿ ಹುದ್ದೆಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿ" ಎಂಬ ಪದಗಳನ್ನು, ಅಂಕೆಗಳನ್ನು ಹಾಗೂ ಅಕ್ಷರವನ್ನು ಸೇರಿಸತಕ್ಕದ್ದು.

3. ರದ್ಧತಿ ಮತ್ತು ರಕ್ಷಣೆ.—(1) 2018ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು (ತಿದ್ದುಪಡಿ) ಅಧ್ಯಾದೇಶ (2018ರ 12)ವು ಈ ಮೂಲಕ ರದ್ದುಗೊಂಡಿರುವುದು.

(2) ಅಂತಹ ರದ್ಧತಿಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.